ಅ) ನಿಯಮ 94-ಸಿ ಯೋಜನೆಯು ಅಕ್ರಮ ಜಾಗ ಸಕ್ರಮಗೊಳಿಸುವಾಗ ಪಾವತಿಸಬೇಕಾದ ಮೊಬಲಗು ಹಾಗೂ ನ್ಯಾಯಯುತವಾಗಿ ಸ್ಥಳ ಪಡೆಯುವವರು ಪಾವತಿಸುವ ಮೊಬಲಗಿನಲ್ಲಿ ಹೆಚ್ಚು ವ್ಯತ್ಯಾಸವಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಈ ನ್ಯೂನತೆಯನ್ನು ಸರಿಪಡಿಸಲು ಕೈಗೊಂಡ ಕ್ರಮವೇನು?

ಇ) ಮರು ಆದೇಶವನ್ನು ಯಾವಾಗ ಹೊರಡಿಸಲಾಗುವುದು?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ(ಕಂದಾಯ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

ಬೆಂಗಳೂರು ನಗರದಲ್ಲಿರತಕ್ಕ ಮುಜರಾಯಿ ಇಲಾಖೆ ಭೂಮಿಯ ಗುತ್ತಿಗೆ

1230(1006) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು(ಶಿವಾಜಿನಗರ) : ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1. ಬೆಂಗಳೂರು ನಗರದಲ್ಲಿರುವ ಮುಜರಾಯಿ ದೇವಸ್ಥಾನಗಳೆಷ್ಟು ಹಾಗೂ ಈ ದೇವಸ್ಥಾನಗಳಿಗೆ ಸೇರಿದ ಜಮೀನೆಷ್ಟು?

2. ಇವುಗಳ ಪೈಕಿ ಯಾವ ಯಾವ ದೇವಸ್ಥಾನಗಳ ಜಮೀನನ್ನು ಖಾಸಗಿಯವರಿಗೆ ಗುತ್ತಿಗೆಗೆ ನೀಡಲಾಗಿದೆ;

3. ಈ ಗುತ್ತಿಗೆ ಅವಧಿ ಎಷ್ಟು ಹಾಗೂ ಇದರಿಂದ ಬಂದ ವರಮಾನವೆಷ್ಟು?

4. ಈ ರೀತಿ ಗುತ್ತಿಗೆಗೆ ನೀಡುವಾಗ ಸಚಿವ ಸಂಪುಟದ ಅನುಮೋದನೆ ಪಡೆಯಲಾಗಿದೆಯೇ?

5. ಬೆಂಗಳೂರು ನಗರದಲ್ಲಿರುವ ಯಾವ ಯಾವ ದೇವಸ್ಥಾನಗಳ ಜಮೀನನ್ನು ಗುತ್ತಿಗೆಗೆ ನೀಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆ?

ಶ್ರೀಮತಿ ಸುಮಾ ವಸಂತ್ (ಮುಜರಾಯಿ ರಾಜ್ಯ ಸಚಿವರು):

1. ಬೆಂಗಳೂರು ನಗರ ಸಭಾ ವಲಯ ವ್ಯಾಪ್ತಿಯಲ್ಲಿ ಬರುವ ಮುಜರಾಯಿ ಸಂಸ್ಥೆಗಳು 52. ದೇವಾಲಯಗಳ ಆಸ್ತಿ ವಿವರಗಳ ಪಟ್ಟಿ ಲಗತ್ತಿಸಿದೆ.

2. ಪಟ್ಟಿ ಲಗತ್ತಿಸಿದೆ.

3. ಗುತ್ತಿಗೆ ಅವಧಿಯು 5 ವರ್ಷಗಳು ಇರುತ್ತವೆ. ಗುತ್ತಿಗೆಯ ವಾರ್ಷಿಕ ವರಮಾನ ರೂ. 21,70,532-00.

4. ಮಾರುಕಟ್ಟೆ ಮೌಲ್ಯವು ರೂ. 50.00ಲಕ್ಷಗಳಿಗೆ ಮೇಲ್ಪಟ್ಟಿರುವ ಜಮೀನುಗಳಿಗೆ ಸಚಿವ ಸಂಪುಟ ಅನುಮೋದನೆಯನ್ನು ಪಡೆಯಲಾಗಿದೆ. ಇನ್ನುಳಿದ ಜಮೀನುಗಳಿಗೆ ಸರ್ಕಾರದ ಗುತ್ತಿಗೆ ಮಾರ್ಗಸೂಚಿಗಳ ಪ್ರಕಾರ ಪ್ರತಿ 5 ವರ್ಷಗಳಿಗೊಮ್ಮೆ ಗುತ್ತಿಗೆಯನ್ನು ನವೀಕರಿಸಲಾಗುತ್ತಿದೆ.

5. ಪ್ರಸ್ತುತ ಯಾವುದು ಇರುವುದಿಲ್ಲ.

ಅನುಬಂಧ

ಕ್ರ. ಸಂಖ್ಯೆ	ದೇವಾಲಯದ ಹೆಸರು	ವಿಸ್ತೀರ್ಣ	ಗುತ್ತಿಗೆ ಅವಧಿ	ಗುತ್ತಿಗೆದಾರರ ಹೆಸರು	ಆದೇಶ ಸಂಖ್ಯೆ	ವಾರ್ಷಿಕ ಆದಾಯ
1	2	3	4	5	6	7
1)	ಗೋದುಂಬಿಯ ಮಠ, ಗಾಂಧಿನಗರ.	35x45	1-3-84 ರಿಂದ 26-2-2014 (30 ವರ್ಷ)	ಟಿ.ಎಲ್.ಮುದ್ದುಕೃಷ್ಣ	ಎಡಿಎಂ 8 ಸಿಆರ್:1 :82-83, 18-5-83	ರೂ. 600-00
2)	ಶ್ರೀ ಪ್ರಸನ್ನ ಗಂಗಾಧರಸ್ವಾಮಿ, ಅಲಸೂರು ಪೇಟೆ.	30x60	10-5-83 ರಿಂದ 30-4-03 (20 ವರ್ಷ)	ಮೆಹಬೂಬ್ ಖಾನ್	ಎಡಿಎಂ 6 ಸಿಆರ್:565 :82-83, 10-5-83	ರೂ. 4200-00
3)	ಶ್ರೀ ಸುಂದರಾಂಜನೇಯಸ್ವಾಮಿ, ದೇವಾಲಯ, ಇಂದಿರಾನಗರ.	60x40	ಖಾಲಿ ಇದೆ	-	-	-
4)	ಶ್ರೀ ಸಂಪಂಗಿರಾಮಸ್ವಾಮಿ, ದೇವಾಲಯ, ಕನ್ನಿಂಗ್ ಹ್ಯಾಂ ರಸ್ತೆ.	103x113	-	-	-	-
5)	ಶ್ರೀ ವೇಣುಗೋಪಾಲಕೃಷ್ಣ ದೇವಾಲಯ, ಮಲ್ಲೇಶ್ವರಂ	36x132	20-10-89 ರಿಂದ 1-10-2019	ಶ್ರೀ ವಿದ್ಯಾಮಂದಿರ ಶಿಕ್ಷಣ ಸಂಸ್ಥೆ	ಆರ್‌ಡಿ 81 ಎಂಎಲ್‌ಡಿ :87, 20-10-89	ರೂ. 47184-00
6)	-"-	3312 ಚ.ಅ	11-12-01 ರಿಂದ 10-12-11	-"-	ಕಂಇ 33 ಮುಆಬಿ 97	ರೂ. 2046000-00
7)	-"-	5751.50	ಪ್ರಸ್ತಾವನೆ ಸರ್ಕಾರದಲ್ಲಿದೆ.			
8)	ಶ್ರೀ ಕಾಡುಮಲ್ಲೇಶ್ವರಸ್ವಾಮಿ ದೇವಾಲಯ.	5000 ಚ.ಅ	19-6-01ರಿಂದ 18-6-2016	ಸಾಯಿ ಮಂಡಳಿ	ಕಂಇ 9 ಮುಆಬಿ 99 19-6-02	ರೂ. 27600-00
9)	-"-	4000 ಚ.ಸ	ಇಲಾಖೆಯ ವಶದಲ್ಲಿದೆ.			
10)	-"-	1568 ಚ.ಸ	ಇಲಾಖೆಯ ವಶದಲ್ಲಿದೆ.			
11)	-"-	7320 ಚ.ಸ	ಇಲಾಖೆಯ ವಶದಲ್ಲಿದೆ.			

1	2	3	4	5	6	7
12)	ಶ್ರೀ ಸೋಮೇಶ್ವರ ದೇವಾಲಯ, ಅಲಸೂರು	2600 ಏ.ಆ	ಇಲಾಖೆಯ ವಶದಲ್ಲಿದೆ		4-12-02ರ ಪಿಪಿಎ ಪ್ರಕರಣ ದಾಖಲು ಮಾಡಿದೆ.	
13)	ಶ್ರೀ ಪ್ರಳಯಕಾಲದ ಶ್ರೀ ವೀರಭದ್ರ ಸ್ವಾಮಿ, ಗವಿಪುರಂ	ಸ.ನಂ.4ರಲ್ಲಿ 7.15 ಗುಂಟೆ ಸ.ನಂ.10ರಲ್ಲಿ 2.20 ಗುಂಟೆ	ಖಾಲಿ ಇದೆ		-	
			ಏಸ್‌ಎ ಪ್ರಕರಣ 29:98-99 ವಿಶೇಷ ಜಿಲ್ಲಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆ, ಇತ್ಯರ್ಥಕ್ಕೆ ಬಾಕಿ ಇದೆ.			
14)	ಶ್ರೀ ಧರ್ಮರಾಯಸ್ವಾಮಿ ದೇವಾಲಯ, ಅಲಸೂರುಪೇಟೆ.	ಸ.ನಂ.33ರಲ್ಲಿ 14.00 ಗುಂಟೆ 16.20 ಗುಂಟೆ	ಉಚ್ಚ ನ್ಯಾಯಾಲಯದ ಬಾಕಿ ಪ್ರಕರಣ ಸಂಖ್ಯೆ ರಿಟ್ ಅರ್ಜಿ ಸಂ.2698:01 ಪಿಪಿಎ ನಂ. 1:97-98 ಇತ್ಯರ್ಥಕ್ಕೆ ಬಾಕಿ			
15)	ಶ್ರೀ ಕಾರಂಜಿ ಆಂಜನೇಯ ದೇವಾಲಯ	153.6320 165x100	9-11-73 ರಿಂದ 8-11-2023	ಬಿ.ಎಂ.ಎಸ್.ಕಾಲೇಜು	-	ರೂ. 1200-00
16)	-"-	38x25	-"-	-"-	-	ರೂ.2400-00
17)	ಶ್ರೀ ದೊಡ್ಡಬಸವಣ್ಣ ದೇವಾಲಯ ಬಸವನಗುಡಿ, ಬೆಂ.	150x300	1-9-91 ರಿಂದ 31-8-2001	-"-	ಆರ್‌ಡಿ 93 ಎಂಎಲ್‌ಡಿ 90 ದಿ:22-8-91	ರೂ.19548-00
18)	-"-	3752 ಚ.ಮೀ	30-10-92 ರಿಂದ 29-10-2022	-"-	ಆರ್‌ಡಿ 323 ಎಂಎಲ್‌ಡಿ 92 ದಿ: 30-10-92	ರೂ. 11,000-00 ಈ ಜಾಗವನ್ನು ದೇವಾಲಯಕ್ಕೆ ಉಳಿಸಿ ಕೊಳ್ಳಲು, ಸರ್ಕಾರಿ ಆದೇಶ ರದ್ದುಪಡಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ.
19)	ಶ್ರೀ ಬನಶಂಕರಿ ದೇವಾಲಯ, ಬನಶಂಕರಿ.	7 ಎಕರೆ 11 ಗುಂಟೆ	-	-	-	-
20)	ಶ್ರೀ ಕೋಡಿ ಆಂಜನೇಯ ದೇವಾಲಯ	1 ಎಕರೆ 3 ಗುಂಟೆ		ಶ್ರೀ ರಾಮ ಭಜನ ಮಂದಿರ	ರೂ.1200-00	